**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ . ದಂಡಾಧಿಕಾರಿಗಳ ನ್ಯಾಯಾಲಯ, ಆನೇಕಲ್.**

| | |
|---|---|
| ಒ.ಎಸ್. ನಂ :- | **14/2017** |
| ಡಿ.ಡಬ್ಲ್ಯೂ | **1** |
| ದಿನಾಂಕ :- | **07.04.2026** |

**ಸಾಕ್ಷಿ ಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ. ಎಸ್.ಕೆ. ವಕೀಲರಿಂದ**

ಲಿಂಗಾಪುರ ಗ್ರಾಮದ ಸರ್ವೆ ನಂಬರ್-5 ರಲ್ಲಿ ಒಟ್ಟು 6 ಎಕರೆ 30 ಗುಂಟೆ ಇದೆ ಎಂದರೆ ಸರಿ. ಅದರಲ್ಲಿ 16 ಗುಂಟೆ ಖರಾಬು ರಸ್ತೆ ಇದೆ ಎಂದರೆ ಸರಿ. ಸದರಿ 6 ಎಕರೆ 30 ಗುಂಟೆ ಪೈಕಿ ನಮ್ಮ ತಂದೆ ಚಿಕ್ಕಮುನಿಸ್ವಾಮಿ, ಚಿಕ್ಕಪ್ಪ ತಿಮ್ಮರಾಯಪ್ಪ ಹಾಗೂ ಮುತ್ತಪ್ಪ ರವರಿಗೆ ಒಟ್ಟು 1 ಎಕರೆ 2 ಗುಂಟೆ ಇದೆ ಎಂದರೆ ಸರಿ. ಸದರಿ ಸರ್ವೆ ನಂಬರ್ ನಲ್ಲಿ ಗೌರಮ್ಮ ನವರಿಗೆ 1 ಎಕರೆ ಇದೆ ಎಂದರೆ ಗೊತ್ತಿಲ್ಲ. ಸದರಿ ಸರ್ವೆ ನಂಬರ್ ನಲ್ಲಿ ಶಾರದಮ್ಮ ನವರಿಗೆ 15 ಗುಂಟೆ ಇದೆ ಎಂದರೆ ಗೊತ್ತಿಲ್ಲ. ಅದೇ ರೀತಿ ಸದರಿ ಸರ್ವೆ ನಂಬರ್ ನಲ್ಲಿ ವಾದಿಗೆ 3 ಎಕರೆ ಉಳುಮೆ ಜಮೀನು ಇದೆ ಎಂದರೆ ಗೊತ್ತಿಲ್ಲ. ಅದೇ ರೀತಿ ಸದರಿ ಸರ್ವೆ ನಂಬರ್ ನಲ್ಲಿ 1 ಗುಂಟೆಯಲ್ಲಿ ಸರ್ಕಾರಿ ಶಾಲೆ ಇದೆ ಎಂದರೆ ಸಾಕ್ಷಿ ಸರ್ಕಾರಿ ಶಾಲೆ 20 ಗುಂಟೆಯಲ್ಲಿ ಇದೆ. ಆ ಬಗ್ಗೆ ನಮೂನೆ-9 ಮತ್ತು 10 ಇದೆ ಹಾಗೂ ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಾನು ಕೊಟ್ಟಿರುವ ದಾಖಲೆಗಳ ಬಗ್ಗೆ ತಿಳಿದುಕೊಂಡಿದ್ದೇನೆ. 20 ಗುಂಟೆಯಲ್ಲಿ ಸರ್ಕಾರಿ ಶಾಲೆ ಇದೆ ಎಂಬ ಬಗ್ಗೆ ನಾನು ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸಾಕ್ಷಿ ಮುಂದೆ ಕೊಡುತ್ತೇ ಎಂದು ನುಡಿದಿರುತ್ತಾರೆ. ಅದೇ ರೀತಿ ಸದರಿ ಸರ್ವೆ ನಂಬರ್ ನಲ್ಲಿ ಪ್ರಸಾದ್ ರೆಡ್ಡಿ ರವರಿಗೆ 36 ಗುಂಟೆ ಇದೆ ಎಂದರೆ ಸರಿ. ನಿಪಿ-17 ನಕಾಶೆಯಲ್ಲಿ ಕಾಣುವ 5/1 ನಮ್ಮ ಜಮೀನು ಎಂದರೆ ಗೊತ್ತಿಲ್ಲ. ಕಂದಾಯ ದಾಖಲೆಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇಲ್ಲ. ನಿಪಿ-17 ರಲ್ಲಿ 5/1 ಕಾಣಿಸಿರುವ ಜಮೀನು ನಮ್ಮದು ಎಂದರೆ ಗೊತ್ತಿಲ್ಲ. ಸರ್ವೆ ನಂಬರ್-5 ರಲ್ಲಿ ನಮ್ಮ ಜಮೀನು ಎಲ್ಲಿ ಬರುತ್ತದೆ ಎಂದು ಗುರುತಿಸಲು ನಮ್ಮ ತಂದೆಯವರು ಅರ್ಜಿ ಕೊಟ್ಟಿರಬಹುದು. ನಿಪಿ-17 ರಲ್ಲಿ 5/2 ಎಂದು ಕಾಣಿಸಿರುವ ಜಮೀನು ಗೌರಮ್ಮ ನವರದ್ದು ಎಂದರೆ ಸರಿ. ನಿಪಿ-17 ರಲ್ಲಿ 5/3 ಎಂದು ಕಾಣಿಸಿರುವ ಜಮೀನು ಶಾರದಮ್ಮ ನವರ 15 ಗುಂಟೆ ಜಮೀನು ಎಂದರೆ ಗೊತ್ತಿಲ್ಲ. ನಿಡಿ-5 ರಲ್ಲಿ ಕಾಣಿಸರುವ ಬಿ ಷೆಡ್ಯೂಲ್ 1ನೇ ಐಟಂ ನಲ್ಲಿ ಸಂಜೀವಪ್ಪ ಎಂದು ತೋರಿಸಿರುವ ಜಮೀನು ಈಗ ಶಾರದಮ್ಮ ನವರ ಜಮೀನು ಎಂದರೆ ಸರಿ. ಸದರಿ ಶಾರದಮ್ಮ ಜಮೀನಿನ ದಕ್ಷಿಣಕ್ಕೆ ಇರುವ ಜಮೀನು ದಾವಾ ಆಸ್ತಿಯ ಎ ಷೆಡ್ಯೂಲ್ ಹಾಗೂ ವಾದಿಗೆ ಸಂಬಂಧಿಸಿದ್ದು ಎಂದರೆ ಸರಿ. ಸದರಿ ವಾದಿಯ ಜಮೀನಿನ ಪಶ್ಚಿಮದ ಸ್ವಲ್ಪ ಭಾಗದಲ್ಲಿ 5/5 ಎಂದು 1 ಗುಂಟೆ ತೋರಿಸಿರುವ ಜಾಗದಲ್ಲಿ ಸರ್ಕಾರಿ ಶಾಲೆ ಎಂದರೆ ಸಾಕ್ಷಿ ಅದು 20 ಗುಂಟೆ ಇದೆ ಎಂದು ನುಡಿದಿರುತ್ತಾರೆ. ನಿಪಿ-17 ರಲ್ಲಿ 5/6 ಎಂದು ಕಾಣಿಸಿರುವ ಜಮೀನು ಪ್ರಸಾದ್ ರೆಡ್ಡಿ ಯವರದ್ದು ಎಂದರೆ ಸರಿ. ಸದರಿ ಸರ್ವೆ ನಂಬರ್-5 ರ ಪೂರ್ತ ಆಸ್ತಿ ನಿಪಿ-17

ರಂತೆ ಇದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-17 ರಲ್ಲಿ ಪೂರ್ವಕ್ಕೆ 7 ಮೀಟರ್, ಪಶ್ಚಿಮಕ್ಕೆ 23.60 ಮೀಟರ್, 5.40 ಮೀಟರ್ ಹಾಗೂ ಉತ್ತರಕ್ಕೆ 35 ಮೀಟರ್ ಮತ್ತು ದಕ್ಷಿಣಕ್ಕೆ 37.80 ಮೀಟರ್ ದಾವಾ ಬಿ ಷೆಡ್ಯೂಲ್ ಎಂದರೆ ಸರಿಯಲ್ಲ. ಸದರಿ ವಿಸ್ತೀರ್ಣದ ಸರ್ವೆ ನಂಬರ್-5/4 ಹಾಗೂ 5/5 ಬರುತ್ತದೆ ಎಂದು ನುಡಿದಿರುತ್ತಾರೆ. ಸದರಿ ವಿಸ್ತೀರ್ಣದ ದಕ್ಷಿಣದ ಕಡೆಗೆ ಸರ್ವೆ ನಂಬರ್-14 ಎಂದರೆ ಸರಿ. ಸದರಿ ವಿಸ್ತೀರ್ಣದ ಆಸ್ತಿ ವಾದಿ ಸ್ವಾಧೀನದಲ್ಲಿ ಇರುವ ಆಸ್ತಿ ಎಂದರೆ ಸರಿಯಲ್ಲ. ಸದರಿ ವಿಸ್ತೀರ್ಣದ ಆಸ್ತಿ ನಮ್ಮದು ಎಂದು ಹೇಳಲು ದಾಖಲೆ ಏನು ಕೊಟ್ಟೀದ್ದೀರಾ ಎಂದರೆ ಸಾಕ್ಷಿ ಕ್ರಯಪತ್ರ ಕೊಡುತ್ತೇನೆಂದು ನುಡಿದಿರುತ್ತಾರೆ. ಸರ್ವೆ ನಂಬರ್-5/1 ಹಾಗೂ ಮೇಲೆ ಹೇಳಿದ ವಿಸ್ತೀರ್ಣದ ಮಧ್ಯೆ ಶಾರದಮ್ಮ ನ ಜಮೀನು ಇದೆ ಎಂದರೆ ಸರಿಯಲ್ಲ. ಆ ವಿಚಾರ ನನಗೆ ಗೊತ್ತಿದ್ದರು ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕಃ 30.03.2024 ರಂದು ಸರ್ವೆ ನಂಬರ್-14 ಕ್ಕೆ ನಾನು ಹೇಳಿರುವ ಚೆಕ್ಕುಬಂದಿಗೆ ಪೂರಕವಾಗಿ ಯಾವುದಾದರೂ ದಾಖಲೆಗಳನ್ನು ಕೋಟ್ಟಿದ್ದೀರಾ ಎಂದರೆ ಹೌದು ಎಂದು ನುಡಿದಿರುತ್ತಾರೆ. ಸರ್ವೆ ನಂಬರ್-14 ಕ್ಕೆ ಸಂಬಂಧಿಸಿದಂತೆ ನಾನು ಹೇಳಿರುವ ಚೆಕ್ಕುಬಂದಿಗೆ ತಾಳೆ ಆಗುವ ಹಾಗೇ ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಡಿ-23 ಮತ್ತು 24 ರಲ್ಲಿ ಕಾಣುವ ಮನೆ ನಮ್ಮದು ಎಂದರೆ ಸರಿ. ಸದರಿ ಮನೆಯ ಕಾಂಪೌಂಡ್ ಉತ್ತರಕ್ಕೆ ಕಾಣಿಸಿಮ ಖಾಲಿ ಜಾಗ ಬಿ ಷೆಡ್ಯೂಲ್ ಆಸ್ತಿ ಎಂದರೆ ಸರಿಯಲ್ಲ. ಅದರಲ್ಲಿ ಕಾಣಿಸುವ ಮರ ವಾದಿ ಹಾಕಿರುವುದು ಎಂದರೆ ಸರಿಯಲ್ಲ. ನಾವು ಸದರಿ ಮರಗಳನ್ನು ಕಟಾವು ಮಾಡಲು ಬಂದಾಗ ತೆಗೆದಿರುವ ಛಾಯಚಿತ್ರಗಳು ನಿಪಿ-23 ಮತ್ತು 24 ಎಂದರೆ ಸರಿಯಲ್ಲ. ಸದರಿ ಬಿ ಷೆಡ್ಯೂಲ್ ಆಸ್ತಿ ಎ ಷೆಡ್ಯೂಲ್ ನ ಆಸ್ತಿ ಭಾಗ ಎಂದರೆ ಸರಿಯಲ್ಲ. ಸರ್ವೆ ನಂಬರ್-14 ರಲ್ಲಿರುವ ನಮ್ಮ ಎಲ್ಲಾ ಜಾಗಕ್ಕೂ ಕಾಂಪೌಂಡ್ ಹಾಕಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕಃ 24.06.2016 ರಂದು ಹಾಗೂ ದಿನಾಂಕಃ 04.01.2017 ರಂದು ದಾವಾ ಬಿ ಷೆಡ್ಯೂಲ್ ಆಸ್ತಿಯನ್ನು ನಾವು ಒತ್ತುವರಿ ಮಾಡಲು ಬಂದೇವು ಎಂದರೆ ಸರಿಯಲ್ಲ. ಆಗ ವಾದಿ ಪೊಲೀಸರಿಗೆ ದೂರು ಕೊಟ್ಟರು ಎಂದರೆ ಸರಿ. ಆಗ ನಾವು ವಾದಿಯ ದಾವಾ ಬಿ ಷೆಡ್ಯೂಲ್ ತೊಂದರೆ ಕೊಡುವುದಿಲ್ಲವೆಂದು ಪೊಲೀಸರ ಮುಂದೆ ಒಪ್ಪಿಕೊಂಡು ಬಂದೇವು ಎಂದರೆ ಸರಿಯಲ್ಲ. ನಂತರ ದಿನಾಂಕಃ 04.01.2017 ರಂದು ಮತ್ತೊಮ್ಮೆ ದಾವಾ ಬಿ ಷೆಡ್ಯೂಲ್ ವಾದಿಯ ಸ್ವಾಧೀನಕ್ಕೆ ತೊಂದರೆ ಕೊಟ್ಟೆವು ಎಂದರೆ ಸರಿಯಲ್ಲ. ಆ ಕಾರಣ ವಾದಿ ಈ ದಾವೆ ಮಾಡಿದ್ದಾರೆ ಎಂದರೆ ಸರಿಯಲ್ಲ.

ದಾವಾ ಎ ಷೆಡ್ಯೂಲ್ ಆಸ್ತಿ ಮೊದಲು ಮುನಿಯಪ್ಪನವರದ್ದು ಎಂದರೆ ಗೊತ್ತಿಲ್ಲ. ಸದರಿ ಮುನಿಯಪ್ಪ ದಾವಾ ಎ ಷೆಡ್ಯೂಲ್ ಆಸ್ತಿ ನಿಪಿ-1 ರಂತೆ ಸುಬ್ಬಯ್ಯಶೆಟ್ಟಿಗೆ ಮಾರಾಟ ಮಾಡಿದ್ದಾರೆ ಎಂದರೆ ಇರಬಹುದು. ಸದರಿ

ಸುಬ್ಬಯ್ಯಶೆಟ್ಟಿ ದಾವಾ ಎ ಷೆಡ್ಯೂಲ್ ಆಸ್ತಿ ನಿಪಿ-22 ರಂತೆ ವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಈ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ವಾದಿ ಸದರಿ ಸ್ವತ್ತಿನಲ್ಲಿ ಬೆಳೆ ಬೆಳೆಯುತ್ತಿದ್ದಾರೆ ಎಂದರೆ ಸರಿಯಲ್ಲ. ಅವರು ಅಲ್ಲಿ ಮನೆಯನ್ನು ಸಹ ಕಟ್ಟಿಕೊಂಡಿದ್ದಾರೆ ಎಂದರೆ ಸರಿ. ದಾವಾ ಬಿ ಷೆಡ್ಯೂಲ್ ಸ್ವತ್ತು ದಾವಾ ಎ ಷೆಡ್ಯೂಲ್ ಸ್ವತ್ತಿ ಭಾಗ ಎಂದರೆ ಗೊತ್ತಿಲ್ಲ. ದಾವಾ ಬಿ ಷೆಡ್ಯೂಲ್ ಗೆ ಸಂಬಂಧಿಸಿದಂತೆ ದಾಖಲೆ ಕೊಟ್ಟಿರುತ್ತೇನೆ. ದಾವಾ ಬಿ ಷೆಡ್ಯೂಲ್ ಗೆ ಸಂಬಂಧಿಸಿದಂತೆ ನಾನು ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಡಿ-5 ರಲ್ಲಿ ಸುಳ್ಳು ಚೆಕ್ಕುಬಂದಿ ತೋರಿಸಿ ದಾವಾ ಬಿ ಷೆಡ್ಯೂಲ್ ಆಸ್ತಿ ನಮ್ಮದು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಛಾಯಚಿತ್ರಗಳನ್ನು ಸೃಷಿ ಮಾಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಬಿ ಷೆಡ್ಯೂಲ್ ಆಸ್ತಿ ವಾದಿಗೆ ಸೇರಿದ್ದು ಹೌದ ಅಥವಾ ಅಲ್ಲವಾ ಎಂದು ತಿಳಿದುಕೊಳ್ಳಲು ನ್ಯಾಯಾಲಯದ ಕಡೆಯಿಂದ ಮೋಜಿಣಿ ಮಾಡಿಸಲು ನನಗೆ ಯಾವುದೇ ಅಭ್ಯಂತರವಿಲ್ಲ. ವಾದಿ ಶಾಲೆಗೆ 1 ಗುಂಟೆ ಜಮೀನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಬಿ ಷೆಡ್ಯೂಲ್ ಆಸ್ತಿ ಸರ್ವೆ ನಂಬರ್-5/4 ಕ್ಕೆ ಸೇರಿದ್ದು ಎಂದರೆ ಸರಿಯಲ್ಲ. ನಾನು ಮನೆ ಕಟ್ಟಿರುವುದು ಸರ್ವೆ ನಂಬರ್-14 ರಲ್ಲಿ. ಸರ್ವೆ ನಂಬರ್-5 ರಲ್ಲಿಯೂ ಸಹ ನಮ್ಮ ಮನೆ ಇದೆ. ಸರ್ವೆ ನಂಬರ್-5 ರಲ್ಲಿ ನಮ್ಮದು ಮನೆಯಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರನಿಗೆ ಓದಿ ಹೇಳಲಾಯಿತು)**

ಓ.ಹೇ.ಕೇ. ಸರಿ ಇದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು, ಆನೇಕಲ್.**